

ನಮ್ಮ ದೇಶದಲ್ಲಿಂದು ಅನ್ನ ತಿನ್ನುವ ಬಹು ದೊಡ್ಡ ಸಂಖ್ಯೆ ನಗರದಲ್ಲಿದೆ. 'ಅನ್ನ' ಎಂದರೆ ಆಹಾರ ಎಂದರ್ಥ. ಅದು ಬರೀ ಅಕ್ಕಿಯೇ ಆಗಬೇಕಾಗಿಲ್ಲ. ರಾಗಿ, ಜೋಳ, ಗೋಧಿ, ನವಣೆ, ಆರ್ಕ... ಯಾವುದೇ ಇರಲಿ – ರೊಟ್ಟಿ, ಮುದ್ದೆ, ಚಪಾತಿ, ಮ್ಯಾಗಿ, ಮೊಟ್ಟೆ, ಮಾಂಸ ಏನೇ ಇರಲಿ – ಬಹುಪಾಲು ಇವೆಲ್ಲಾ ನಗರ ಸೇರುವುದು ಹಳ್ಳಿಗಳಿಂದಲೇ. ಅಲ್ಲಿ ಕೂತು ಉಣ್ಣುವವರಿಗೆ ಧಾನ್ಯ–ಕಾಳುಗಳು ಹೇಗೆ ಬೆಳೆಯುತ್ತವೆ? ಬಿತ್ತುವುದು, ಬೆಳೆಯುವುದು, ಕೊಯ್ಯುವುದು – ಯಾವುದೂ ಕಾಣಿಸುವುದಿಲ್ಲ. ಈ ಮಹಾನಗರದೊಳಗೆ ಬದುಕುವ ಹೊಸ ತಲೆಮಾರಿಗೆ ಅಕ್ಕಿಯ ಮೂಲವಾದ ಭತ್ತ ಹೇಗೆ ಬೆಳೆಯುತ್ತದೆ, ಹಾಲು ಎಲ್ಲಿಂದ ಬರುತ್ತದೆ ಎಂಬ ಜ್ಞಾನವೇ ಇಲ್ಲ! ಗದ್ದೆಯನ್ನೇ ನೋಡದೆ ಅನ್ನ ತಿನ್ನುವ, ಹಸು ನೋಡದೆಯೇ ಹಾಲು ಕುಡಿಯುವ ಬದುಕು ಅವರದು. ಪೇಟೆಯ ಮಂದಿಗೆ ಆಹಾರದ ಮೂಲಗಳ ಅರಿವು ಮೂಡಿಸುವ ಕಾರ್ಯಕ್ರಮ ನಮ್ಮಲ್ಲಿ ಕಡಿಮೆ. ವಿಷ ಮೀತಿಮೀರಿ 'ಪಂಜಾಬಿನ್ನಲ್ಲೀಗ ಕ್ಯಾನ್ಸರ್ ರೈಲು ಓಡುತ್ತಿದೆ' ಎಂಬ ಲೇಖನದಲ್ಲೇ ಕಟ್ಟಿ ತಂದ ಪಕೋಡ ತಿನ್ನುತ್ತೇವೆ. ಆದರೆ ಆ ಪತ್ರಿಕೆ, ಲೇಖನ ಓದುವುದಿಲ್ಲ. ಆ ಪತ್ರಿಕೆಯ ಹಾಳು ಮಸಿ ಪಕೋಡದೊಂದಿಗೆ ದೇಹ ಸೇರಿದ್ದೂ ಗೊತ್ತಾಗುವುದಿಲ್ಲ. ಗೋಧಿ ಬೆಳೆಯುವ ರೈತ ತಿಂಗಳಿಗೆ ಎಷ್ಟು ಬಾರಿ ವಿಷ ಸಿಂಪಡಿಸುತ್ತಾನೆ? ಕೊಯ್ಲು ಆದ ಮೇಲೆ ಧಾನ್ಯ ವಿಷದ ನೀರಿನಲ್ಲಿ ಮಿಂದು ಬರುವುದು ಹೇಗೆ? ಮಾವು ಹಣ್ಣಾಗಲು ಮೆತ್ತುವ ಪುಡಿ ಯಾವುದು? ಸೇಬಿಗೆ ಅಂಟಿಕೊಂಡ ಮೇಣ ಎಷ್ಟು ಅಪಾಯಕಾರಿ? ದ್ರಾಕ್ಷಿಯ ಮೇಲಿರುವ ಬಿಳಿ ಬಣ್ಣ ಏನು? ಇವೆಲ್ಲಾ ತಿನ್ನುವ ಬಾಯಿಗೆ ಗೊತ್ತಾಗುವುದೇ ಇಲ್ಲ. ಅಮೆರಿಕ, ಯೂರೋಪ್, ಇರಾನ್ ಮುಂತಾದ ದೇಶಗಳು ನಮ್ಮ ಉತ್ಪನ್ನಗಳಿಗೆ ವಿಷ–ಕಲಬೆರಕೆಯ ಕಾರಣಗಳಿಗೆ ನಿಷೇಧ ಹೇರಿದಾಗ ಅವೆಲ್ಲಾ ರಾಷ್ಟ್ರೀಯ ಮಾಧ್ಯಮಗಳಲ್ಲಿ ಸಿಂಗಲ್ ಕಾಲಂ ಸುದ್ದಿಯಾಗುತ್ತವೆ!

ನಮ್ಮ ಮಾಧ್ಯಮಗಳನ್ನು ಗಮನಿಸಿ: ಸಿನಿಮಾಕ್ಕೆ, ಕ್ರೀಡೆಗೆ, ಫ್ಯಾಷನ್‌ಗೆ, ಯುವಕರಿಗೆ, ಜೋಯಿಸರಿಗೆ, ಸ್ತ್ರೀಯರಿಗೆ, ಮಕ್ಕಳಿಗೆ – ಎಲ್ಲರಿಗೂ ಎಲ್ಲದಕ್ಕೂ ಪುಟ, ಜಾಗ, ಸಮಯವಿದೆ. ಅನ್ನದಿಂದ ಮೊಸರನ್ನ ಮಾಡುವ, ಬಿರಿಯಾನಿ ಮಾಡುವ ಅಡುಗೆ, ಹೊಸ ರುಚಿಗಳಿಗೆ ಪ್ರತ್ಯೇಕ ಜಾಗವಿದೆ. ಆದರೆ ಅದೇ ಅನ್ನ, ಕುಡಿಯುವ ನೀರು ಹಾಗೂ ಸೇವಿಸುವ ಗಾಳಿಯಲ್ಲಿ ವಿಷದ ಶೇಷಾಂಶ ತೋರುವ ಒಂದೇ ಒಂದು ಕಾಯಂ ಜಾಗವಿಲ್ಲ. ಅಂಕಣವೂ ಬಹುಶಃ ಇಲ್ಲ. ರುಚಿ, ಸ್ವಾದ, ಬಣ್ಣ, ಪ್ರದರ್ಶನಗಳೇ ನಿಜವಾದ ಮಾನದಂಡಗಳಾಗಿ ತಿನ್ನುವ ಅನ್ನದ ಒಳಗಡೆಯ ಸತ್ವ ಸಾಯುತ್ತಿದೆ. ಪರಿಣಾಮ ಮತ್ತು ಈ ಅಜ್ಞಾನ–ಅವಸರದ ದಾರಿಯಲ್ಲಿ ಹೊಸ ತಲೆಮಾರು, ನಮ್ಮ ಮುಂದಿನ ಮಕ್ಕಳು ಆಸ್ಪತ್ರೆಯಲ್ಲೇ ಹುಟ್ಟಿ, ಆಸ್ಪತ್ರೆಯಲ್ಲೇ ಬೆಳೆದು, ಆಸ್ಪತ್ರೆಯಲ್ಲೇ ಸಾಯುವ ಸ್ಥಿತಿ ಸೃಷ್ಟಿಯಾಗುತ್ತಿದೆ.

ಬಹುಶಃ ನಮ್ಮದು ಸಹಜವಾದ ಗಾಳಿ, ಸಹಜ ನೀರು, ಸಹಜ ಅನ್ನ ತಿಂದು ಬದುಕುತ್ತಿರುವ ಕೊನೆಯ ತಲೆಮಾರು ಇರಬಹುದು. ನನ್ನ ತಂದೆ ಮೊನ್ನೆ ಮೊನ್ನೆಯವರೆಗೆ ಬದುಕಿದ್ದರು. ಅವರು ಜೀವಮಾನದಲ್ಲಿ ಬಳಸಿದಷ್ಟು ಔಷಧಿಯನ್ನು ನಾನು ಅವರ ಅರ್ಧವಯಸ್ಸಿನಲ್ಲೇ ನುಂಗಿದೆ. ನನ್ನ ಮಗಳು ನಾನು ಈಗಾಗಲೇ ಬಳಸಿದ್ದಷ್ಟನ್ನು ನುಂಗಿ ನೀರು ಕುಡಿದಿದ್ದಾಳೆ. ಇದೇ ಲೆಕ್ಕ ಸರಣಿಯಲ್ಲಿ ಮುಂದುವರೆದರೆ ಆಸ್ಪತ್ರೆಗಳೇ ಮನೆಗಳಾಗುವ ಅಥವಾ ಮನೆಗಳೇ ಆಸ್ಪತ್ರೆಗಳಾಗುವ ದಿನಗಳು ದೂರವಿಲ್ಲ. ಅನ್ನದಾರಿಯ ಈ ನಿರ್ಲಕ್ಷ್ಯ, ವಿಷ, ಮಲಿನತೆಯಿಂದಾಗಿಯೇ ಆಸ್ಪತ್ರೆಗಳು, ವೈದ್ಯರು ಹೆಚ್ಚಾಗುತ್ತಿದ್ದಾರೆ. ಯುವಕರು ಚಿಕ್ಕ ವಯಸ್ಸಿನಲ್ಲೇ ಮುದುಕರಾಗುತ್ತಿದ್ದಾರೆ. ಒಂದು ಕಡೆ ಆಹಾರ ವೈವಿಧ್ಯದ ವೃದ್ಧಿ ಮತ್ತು ಸುಖದ ದಾರಿಗಳು ಸಮೃದ್ಧಿಯಾದರೂ ಮನೋಖಿನ್ನತೆಗೆ ಕೊರತೆಯಿಲ್ಲ. ಅನ್ನಕ್ಕೆ ಸಮಸ್ಯೆಯಿಲ್ಲ, ನೆಮ್ಮದಿಗೆ ಸಮಸ್ಯೆ ಎಂದಾಗಿದೆ. ಮನಸ್ಸು–ದೇಹ ಎರಡೂ ಹಾಳಾಗಿ ಜಿಗುಪ್ಸೆ ಕಾಡುತ್ತಿದೆ.

ಆಹಾರದೊಂದಿಗೆ ಸೇರ್ಪಡೆಯಾಗುತ್ತಿರುವ ಕಠೋರ ವಿಷಗಳ ಮೂಲ ಎರಡು ಮಹಾಯುದ್ಧಗಳು. ಯುದ್ಧ ಮುಗಿದ ಮೇಲೆ ಅಮೋನಿಯಂಯುಕ್ತ ಯುದ್ಧೋಪಕರಣಗಳನ್ನು ಸೃಷ್ಟಿಸುವ ಕಾರ್ಖಾನೆಗಳು ಅದೇ ಮೂಲವಸ್ತುಗಳನ್ನಿಟ್ಟುಕೊಂಡು ರಾಸಾಯನಿಕ ಗೊಬ್ಬರ ಉತ್ಪಾದನೆಗೆ ತೊಡಗಿದವು. ಆವರೆಗೆ ಭಾರತದಲ್ಲಿದ್ದುದು ರಾಸಾಯನಿಕ ವಿಷಮುಕ್ತ ಸಾಯವಯ ಕೃಷಿ. ಸಸ್ಯ, ಪ್ರಾಣಿಜನ್ಯ ಗೊಬ್ಬರಗಳನ್ನಷ್ಟೇ ಬಳಸಿ ಕೃಷಿ ಮಾಡುವ ದೇಸಿ ಸಾಗುವಳಿ ಅಲ್ಲಿತ್ತು. ನೆಲಪರ, ಜೀವಪರ, ದೇಸೀ ಜೀವನಪದ್ಧತಿ ಜಾರಿಯಲ್ಲಿತ್ತು. ಆಧುನಿಕ ಯುದ್ಧ

**ಆಹಾ ಆಹಾರದ ವೃಕ್ಷ!**

ನೋಡಿದಾಕ್ಷಣ 'ಆಹಾ' ಎಂಬ ಉದ್ಗಾರ ಹೊರಡಿಸುವಂತಿರುವ ಬಗೆಬಗೆಯ ಫಲಗಳ ಈ ಮಾನವನಿರ್ಮಿತ ಫಲವೃಕ್ಷ ಆರೋಗ್ಯಪೂರ್ಣವೂ ಆಗಿದೆಯೇ?